**ದಿನಾಂಕಃ 04.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 9ನೇ ಪ್ರತಿ ವಾದಿ ಪರ ವಕೀಲರಿಂದಃ**

1.ನಾನು ಎಸ್ ಎಸ್ ಎಲ್ ಸಿ ವರೆಗೂ ವ್ಯಾಸಾಂಗ ಮಾಡಿದ್ದೇನೆ. 1967 ರಲ್ಲಿ ನಾನು ಎಸ್ ಎಸ್ ಎಲ್ ಸಿ ಮುಗಿಸಿರುತ್ತೇನೆ. ನಾನು ಸದರಿ ದಾವೆಯನ್ನು ಹಾಕುವ ಸಮುಯದಲ್ಲಿ ನನಗೆ 55 ವರ್ಷ ವಯಸ್ಸಾಗಿತ್ತು. ಈಗ ನನಗೆ 70 ವರ್ಷ. ನನಗೆ ಇಂಗ್ಲೀಷ್ ಓದಲು ಬರೆಯಲು ಗೊತ್ತಾಗುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಸಾಕ್ಷಿ ಪ್ರಮಾಣ ಪತ್ರವು ಕನ್ನಡದಲ್ಲಿರುತ್ತದೆ. ನಾನು ಸದರಿ ಪ್ರಮಾಣ ಪತ್ರವನ್ನು ಓದಿರುತ್ತೇನೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಕನ್ನಡದಲ್ಲಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರವನ್ನು ತಯಾರು ಮಾಡುವಾಗ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಸದರಿ ಮಾಹಿತಿಯನ್ನು ದಾಖಲಾತಿಗಳ ಆಧಾರದ ಮೇಲೆ ಕೊಟ್ಟಿರುತ್ತೇನೆ. ನಾನು ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

2. ನಾನು ದಾವೆ ಹಾಕುವ ಸಮಯದಲ್ಲಿ ದೇವಿರಹಳ್ಳಿ ಸಂಗಮ ದಲ್ಲಿ ವಾಸ ಮಾಡುತ್ತಿದ್ದು ನಾನು ಸುಮಾರು 25 ವರ್ಷಗಳಿಂದ ಅಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಸದರಿ ವಿಳಾಸದಲ್ಲಿ ಸುಮಾರು 25 ವರ್ಷಗಳಿಂದ ವಾಸ ಮಾಡುತ್ತಿರುವ ಬಗ್ಗೆ ತೋರಿಸಲು ದಾಖಲಾತಿ ಇದೆ. ಅದನ್ನು ನ್ಯಾಯಾಲಯಕ್ಕೆ ಒದಗಿಸಲು ನನಗೆ ಯಾವುದೇ ತೊಂದರೆ ಇಲ್ಲ. 1ನೇ ಪ್ರತಿವಾದಿ ದೇವೇಗೌಡ  ನನ್ನ ತಂದೆ ಎಂದರೆ ಸರಿ. ನನ್ನ ತಂದೆ ಬೇರೆ ಕಡೆ ವಾಸವಿದ್ದು ನಾನು ಬೇರೆ ಕಡೆ ವಾಸವಿದ್ದೇನು ಎಂದರೆ ಸರಿಯಲ್ಲ. ನಾನು ದಾವೆಯನ್ನು ನ್ಯಾಯಾಲಯಕ್ಕೆ ಹಾಕುವಾಗ ನನ್ನ ವಿಳಾಸ ಹಾಗೂ 1ನೇ ಪ್ರತಿವಾದಿಯ ವಿಳಾಸ ಬೇರೆ ಇರುತ್ತದೆಂದರೆ ಸುಳ್ಳು.

3. ಸದರಿ 1ನೇ ಪ್ರತಿವಾದಿಗೆ ಒಟ್ಟು 9 ಜನ ಮಕ್ಕಳು. ಅವರುಗಳ ಹೆಸರುಗಳು ನನಗೆ ನೆನಪಾಗುತ್ತಿಲ್ಲ. ನಾವು ಎಲ್ಲಾ ಒಟ್ಟಿಗೆ ವಾಸ ಮಾಡುತ್ತಿರುವುದಾಗಿ ಹೇಳಿದ್ದು ಅವರುಗಳ ಹೆಸರು ನೆನಪಾಗುತ್ತಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಅಣ್ಣ ತಮ್ಮಂದಿರ ಹೆಸರುಗಳು

ಹೇಳುತ್ತೇನೆಂದು ನುಡಿಯುತ್ತಾರೆ. ಮಹದೇವ, ನಾಗರಾಜು, ಶಂಕರ ಇವರು ನನ್ನ ತಮ್ಮಂದಿರು. ನನ್ನ ತಂಗಿಯರ ಹೆಸರು ಜಯಮ್ಮ, ಮಹದೇವಮ್ಮ, ಶಿವಲಿಂಗಮ್ಮ, ಸರೋಜ ಮತ್ತು ಸುಧಾ ರವರು ಆಗಿರುತ್ತಾರೆ. ನಾನು ದಾವೆ ಹಾಕುವ ಸಂದರ್ಭದಲ್ಲಿ ಇವರುಗಳನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೇರಿಸಿರುತ್ತೇನೆಂದು ನುಡಿಯುತ್ತಾರೆ. ಜಯಮ್ಮರವರನ್ನು ದಾವೆಯಲ್ಲಿ ಪ್ರತಿವಾದಿಯನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ದಾವೆ ಹಾಕುವ ಸಂದರ್ಭದಲ್ಲಿ ಪ್ರತಿವಾದಿಗಳು ಯಾರು ಯಾರು ಎಂದು ತಿಳಿದುಕೊಂಡು ಸಹಿ ಮಾಡಿರುತ್ತೇನೆಂದರೆ ಸರಿ. 1ನೇ ಪ್ರತಿವಾದಿಯು ನಮ್ಮ ಒಟ್ಟು ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾವು ಒಟ್ಟು ಕುಟುಂಬದಲ್ಲಿ ಇರುವುದಾಗಿ ಹೇಳಿದ್ದು 25 ವರ್ಷಗಳಿಂದ ಬೇರೆ ವಾಸ ಮಾಡಲು ಕಾರಣವೇನು ಎಂದರೆ ಸಾಕ್ಷಿಯು ನಾವು ಒಟ್ಟಿಗೆ ಇದ್ದೆವು ಎಂದು ನುಡಿಯುತ್ತಾರೆ. ನಾವು ಒಟ್ಟು ಕುಟುಂಬದಲ್ಲಿದ್ದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ.

5. ಸರ್ವೆ ನಂ.34/1 ಹಾಗೂ 34/2, 1ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುತ್ತದೆಂದರೆ ಸರಿ. ಅದೇ ರೀತಿ ರೆವಿನ್ಯೂ ದಾಖಲಾತಿಗಳು ಅವರ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ಮದುವೆ ಮಾಡಿಸಿದ್ದು 1ನೇ ಪ್ರತಿವಾದಿ ಎಂದರೆ ಸರಿ. ನನಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ನನ್ನ ಮಕ್ಕಳು ಯಾರೂ ವ್ಯಾಸಾಂಗ ಮಾಡುತ್ತಿಲ್ಲ. ನನ್ನ ಮಕ್ಕಳು ನನ್ನ ಜೊತೆ ವ್ಯವಸಾಯ ಮಾಡುತ್ತಿದ್ದಾರೆ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿ ಎಂದು ನಾನು ಹೇಳಿದ್ದು ಈ ಸಂಬಂಧ ದಾಖಲಾತಿಗಳು ಇರುವುದಿಲ್ಲ ಆದರೆ ನಾವು ಒಟ್ಟು ಕುಟುಂಬದಲ್ಲಿ ಕೊಂಡು ಕೊಂಡ ಆಸ್ತಿಗಳು ಎಂದು ಸಾಕ್ಷಿ ನುಡಿಯುತ್ತಾರೆ.

6. ನನ್ನ ತಂದೆ ಸದರಿ ದಾವೆಗೆ ತಕರಾರನ್ನು ಸಲ್ಲಿಸಿದ್ದು ಅದನ್ನು ನಾನು ನೋಡಿರುವುದಿಲ್ಲ. 9ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ಸಹಿತ ನಾನು ಓದಿರುವುದಿಲ್ಲ. ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ದಿನಾಂಕ 08.10.2000 ನೇ ಇಸವಿಯಲ್ಲಿ ಸದರಿ ದಾವಾ ಸ್ವತ್ತುಗಳು ವಿಭಾಗವಾಗಿರುತ್ತವೆಂದು ಹೇಳಿರುತ್ತಾರೆಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಾವೆಯಲ್ಲಿ ತೋರಿಸಿರುವ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ರೆವಿನ್ಯೂ ದಾಖಲಾತಿಗಳು ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ನನ್ನ ಕನ್ನಡ ಓದಲು ಬರುತ್ತದೆ. ಸದರಿ ನಿಪಿ-4 ರ ಪಹಣಿಯಲ್ಲಿ ಸರ್ವೆ ನಂ.34/1 ಇದು ಧ್ಯಾವೇಗೌಡ ಬಿನ್ ಧ್ಯಾವೇಗೌಡ ಇವರ ಹೆಸರಿನಲ್ಲಿ 12.20 ಗುಂಟೆ ಹಾಗೂ ಶಿವಲಿಂಗೇಗೌಡ ಬಿನ್ ಧ್ಯಾವೇಗೌಡ ಇವರ ಹೆಸರಿನಲ್ಲಿ 5 ಎಕರೆ ಇರುತ್ತದೆಂದರೆ ಸರಿ. ಸದರಿ ಶಿವಲಿಂಗೇಗೌಡ ಎಂದರೆ ನಾನೇ ಎಂದರೆ ಸರಿ. ಸದರಿ 5 ಎಕರೆಯನ್ನು ನನ್ನ ಮಾವನವರು ಕೊಂಡುಕೊಂಡು ನನ್ನ ಹೆಸರಿನಲ್ಲಿ ಬರೆಸಿರುತ್ತಾರೆ. ನನ್ನ ಮಾವನವರು ಕೊಂಡುಕೊಂಡು ನನ್ನ ಹೆಸರಿಗೆ ಬರೆಸಿರುವ ದಾಖಲೆ ಹಾಜರುಪಡಿಸುತ್ತೇನೆ.ಯಾವ ವರ್ಷದಲ್ಲಿ ಕೊಂಡುಕೊಂಡಿರುತ್ತಾರೆಂದು ನನಗೆ ನೆನಪಿಲ್ಲ. ನನ್ನ ಮಾವನವರು ನನಗೆ ಯಾವುದೇ ಜಮೀನು ನನ್ನ ಹೆಸರಿಗೆ ಕೊಂಡುಕೊಂಡಿರುವುದಿಲ್ಲ. ಸದರಿ 5 ಎಕರೆ ವಿಭಾಗದ ಮೂಲಕ ಬಂದಿರುತ್ತದೆಂದರೆ ಸರಿಯಲ್ಲ.

7. ನಾನು ಸದರಿ ದಾವೆಯಲ್ಲಿ ಪಹಣಿಗಳನ್ನು ಕೊಟ್ಟಿರುತ್ತೇನೆ. ನಿಪಿ-12 ರ ಪ್ರಕಾರ ಸದರಿ ಪಹಣಿಯಲ್ಲಿ ಕಾಲಂ ನಂ.9 ರಲ್ಲಿ ನನ್ನ ಹಾಗೂ ನನ್ನ ತಮ್ಮಂದಿರ ಹೆಸರು ತೋರಿಸಿದ್ದು ವಿಭಾಗದ ಮೂಲಕ ಆಗಿರುವ ಬಗ್ಗೆ ಇರುತ್ತೆದೆಂದರೆ ಸರಿ. ಅದೇ ರೀತಿ ಸದರಿ ಸರ್ವೆ ನಂ.34/2 ರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಬಂದಿರುತ್ತದೆಂದು ನಮೂದು ಮಾಡಲಾಗಿರುತ್ತದೆಂದರೆ ಸರಿ. 9ನೇ ಪ್ರತಿವಾದಿ ನನ್ನಕುಟುಂಬದವರು ಅಲ್ಲ ನನಗೆ ಗೊತ್ತಿಲ್ಲದೇ ಜಮೀನುಗಳ ವ್ಯವಹಾರ ಮಾಡಿರುತ್ತಾರೆ ಆದ್ದರಿಂದ ಅವರನ್ನು ದಾವೆಯಲ್ಲಿ ಸೇರಿಸಿರುತ್ತೇನೆ. ಯಾವ ವರ್ಷ ಅಥವಾ ಸಮಯದಲ್ಲಿ ಸದರಿಯವರಿಗೆ ಜಮೀನಿನ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿಯವರಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನಾನು ಹಾಜರು ಪಡಿಸಿಲ್ಲ. ಸದರಿಯವರಿಗೆ ಸಂಬಂಧಿಸಿದಂತೆ ಯಾವುದೇ

ಕ್ರಯದ ಕರಾರು ಪತ್ರವನ್ನು ನಾನು ನ್ಯಾಯಲಾಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿರವರಿಗೆ ಅಗ್ರಿಮೆಂಟ್ ಮಾಡಿಸಿರುತ್ತಾರೆಂದು ನನಗೆ ತಿಳಿದು ಬಂದಿರುತ್ತದೆ. ನಾನು ದಾವೆ ಹಾಕುವ ಮುಂಚೆ ಸದರಿ ದಾವಾ ಆಸ್ತಿಗಳ ಸಂಬಂಧ ಋಣಭಾರ ಪತ್ರಗಳನ್ನು ಪಡೆದುಕೊಂಡಿಲ್ಲ. ಸದರಿ ಋಣಭಾರದ ಪತ್ರಗಳ್ನು ಪಡೆದುಕೊಳ್ಳಲು ನನಗೆ ತೊಂದರೆ ಇತ್ತು ಆದ್ದರಿಂದ ಪಡೆದಿಲ್ಲ.

8. ನನಗೂ ಹಾಗೂ ನನ್ನ ತಂದೆಗೂ ದಿನಾಂಕ 08.10.2000 ಇಸವಿಯಲ್ಲೇ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ನಾನು ಈ ಸಂಬಂಧ ಯಾವುದೇ ಪತ್ರ ಬರೆದುಕೊಟ್ಟಿಲ್ಲ. 1ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು 2 ರಿಂದ 4ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಮೆಮೋ ಸಲ್ಲಿಸುವ ಮೂಲಕ ಅದೇ ಪ್ರತಿವಾದ ಪತ್ರವನ್ನು ಒಪ್ಪಿ ಕೊಂಡಿರುತ್ತಾರೆಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಗಳನ್ನು ಹೊರತು ಪಡಿಸಿ ನನ್ನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ. ದಿನಾಂಕ 06.06.1973 ರಲ್ಲಿ ನಾನು ಕೆಲವು ಆಸ್ತಿಗಳನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಈಗ ದಿನಾಂಕ 06.06.1973 ರ ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು 9ನೇ ಪ್ರತಿವಾದಿಯ ಪರ ವಕೀಲರು ಮುಖಬೆಲೆ ಮಾಡಲಾಗಿ ಸದರಿ ದಾಖಲೆಯಹುನ್ನು ಸಾಕ್ಷಿ ಓದಿ ಹೌದು ಸದರಿ ಆಸ್ತಿಗಳನ್ನು ನಾನು ಕೊಂಡುಕೊಂಡಿರುತ್ತೇನೆಂದು ನುಡಿಯುತ್ತಾರೆ. **ಸದರಿ ದಾಖಲೆಯ ಜೊತೆ 9ನೇ ಪ್ರತಿವಾದಿಯ ಪರ ವಕೀಲರು ಅದರ ತರ್ಜುನೆ ಪ್ರತಿಯನ್ನು** ಹಾಜರುಪಡಿಸಿದ್ದು ಅದನ್ನು ಈಗ **ನಿಡಿ-1** ಎಂದು ಗುರುತಿಸಲಾಯಿತು. ಸದರಿ ಪತ್ರದ ಪ್ರಕಾರ ನಾನು 5 ಎಕರೆ ಆಸ್ತಿಯನ್ನು ಕೊಂಡುಕೊಂಡಿರುತ್ತೇನೆ. ಆ ಪ್ರಕಾರ ಕೇವಲ 5 ಎಕರೆ ಆಸ್ತಿಯನ್ನು ಮಾತ್ರ ಕೊಂಡುಕೊಂಡಿರುತ್ತೇನೆ. ಸದರಿ ಪತ್ರದಲ್ಲಿ ಸರ್ವೆ ನಂ.18 ರಲ್ಲಿ 20 ಗುಂಟೆ ಜಮೀನಿಗೆ ಕ್ರಯವಾಗಿರುತ್ತದೆಂದರೆ ಸರಿ. ಅದೇ ರೀತಿ ಸರ್ವೆ ನಂ.34 ರಲ್ಲಿ 1 ಎಕರೆ ಕ್ರಯವಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.18, ಸರ್ವೆ ನಂ.34/1 ಹಾಗೂ ಸರ್ವೆ ನಂ.34 ಈ ಸರ್ವೆ ನಂಬರ್ ಗಳಲ್ಲಿ ನಾನು ಸದರಿ ಪತ್ರದ ಮೂಲಕ ಜಮೀನು ಖರೀದಿಸಿರುತ್ತೇನೆಂದರೆ

ಸರಿ. ಸದರಿ ಜಮೀನುಗಳನ್ನು ನಾನು ಸದರಿ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಜಮೀನುಗಳಲ್ಲಿ ನಾನು ಅನುಭವದಲ್ಲಿರುವ ಕಾರಣ ಸೇರಿಸಿರುವುದಿಲ್ಲ.

9. ದ್ಯಾವೇಗೌಡ ಹಾಗೂ ನಾನು ವಿಭಾಗ ಮಾಡಿಕೊಂಡ ಸಮಯದಲ್ಲಿ ಕೆಲವು ಆಸ್ತಿಗಳನ್ನು ನನಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮರಿಗೌಡ ನನ್ನ ಮಾವ ಅಂದರೆ ನನ್ನ ಹೆಂಡತಿಯ ತಂದೆಯಾಗುತ್ತಾರೆ. ವಿಭಾಗದ ಮೂಲಕ ನನಗೆ ಬಂದ ಆಸ್ತಿಗಳಲ್ಲಿ ಎರಡು ಆಸ್ತಿಯನ್ನು ನನ್ನ ಮಾವನಾದ ಮರಿಗೌಡರವರಿಗೆ ವರ್ಗಾವಣೆ ಮಾಡಿರುತ್ತೇನೆಂದರೆ ಸುಳ್ಳು. ಅದೇ ರೀತಿ ನನ್ನ ಮಾವನ ಹೆಸರಿನಲ್ಲಿ ಈ ಸಂಬಂಧ ಕ್ರಯ ಆಗಿರುತ್ತದೆಂದರೆ ಸರಿ. ಸರಿದ ಕ್ರಯವಾದ ನಂತರ ನನ್ನ ಮಾವ ನನ್ನ ಹೆಂಡತಿಯಾದ ರಾಜಮ್ಮ ಇವರಿಗೆ ದಾನಪತ್ರ ಮಾಡಿಕೊಟ್ಟಿರು ತ್ತಾರೆಂದರೆ ಸರಿ. ಅದೇ ರೀತಿ ನನ್ನ ಮಾವ ಖಾತಾ ವರ್ಗಾವಣೆಗೆ ಅವರ ತಕರಾರು ಇಲ್ಲವೆಂದು ನನ್ನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿರುತ್ತಾರೆಂದರೆ ಸರಿ. ಈ ರೀತಿ ವಿಭಾಗವಾದ ಮೇಲೆ ನಾನು ಹಾಗೂ ನನ್ನ ಅಣ್ಣ ತಮ್ಮಂದಿರು ಅವರಿಗೆ ಬಂದ ಆಸ್ತಿಗಳಲ್ಲಿ ಅನುಭವದಲ್ಲಿದ್ದಾರೆಂದರೆ ಸುಳ್ಳು. ಅದೇ ರೀತಿ ಅವರ ಹೆಸರಿನಲ್ಲಿ ರೆವಿನ್ಯೂ ದಾಖಲಾತಿಗಳು ವರ್ಗಾವಣೆ ಆಗಿರುತ್ತದೆಂದರೆ ಸುಳ್ಳು.

10. ಸಾಕ್ಷಿಗೆ ಈಗ 9ನೇ ಪ್ರತಿವಾದಿಯ ಪರ ವಕೀಲರು ಸರ್ವೆ ನಂ. 34 ರ ಪಹಣಿಯ ಪ್ರತಿಯನ್ನು ಮುಖಬೆಲೆ ಮಾಡಿದ್ದು ಅದರಲ್ಲಿತನ್ನ ಸಹೋದರರ ಹೆಸರು ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಹೌದು ಎಂದು ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ಈಗ **ನಿಡಿ-2** ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ. 34/2 ರ ಪಹಣಿಯ ಪ್ರತಿಯನ್ನು ಮುಖಬೆಲೆ ಮಾಡಿದ್ದು ಅದರಲ್ಲಿತನ್ನ ಸಹೋದರರ ಹೆಸರು ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಹೌದು ಎಂದು ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ಈಗ **ನಿಡಿ-3** ಎಂದು ಗುರುತಿಸಲಾಯಿತು.ಸದರಿ ನಿಡಿ-3 ರಲ್ಲಿ ವಿಭಾಗದ ಮೂಲಕ ಆಗಿರುವ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿ.

11. ನಿಪಿ-6 ಸದರಿ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅದನ್ನು ತಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿಪಿ-6 ರ ಪ್ರಕಾರ 9ನೇ ಪ್ರತಿವಾದಿಗೆ ಸದರಿ ನನ್ನತಂದೆ ಹಾಗೂ ಕುಟುಂಬದವರು ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿ. ಸದರಿ ಪತ್ರವನ್ನು ನಾನು ಓದಿರುವುದಿಲ್ಲ. ಸಾಕ್ಷಿ ಮುಂದುವರಿದು ಅಗ್ರಿಮೆಂಟ್ ಓದಿರುತ್ತೇವೆಂದು ನುಡಿಯುತ್ತಾರೆ. ಸದರಿ ನಿಪಿ-6 ರಲ್ಲಿ ನನ್ನನ್ನು ಹೊರತು ಪಡಿಸಿ ಲಿಂಗಮ್ಮ, ಮಹದೇವಯ್ಯ, ಶಿವಲಿಂಗಯ್ಯ, ಸುಧಾ, ಮಹದೇವ, ನಾಗರಾಜು, ದ್ಯಾವೇಗೌಡ ಉಃ ಶಂಕರೇಗೌಡ, ಜಯಮ್ಮ, ಪುಟ್ಟಲಿಂಗಮ್ಮ, ಮಹಾದೇವಮ್ಮ, ನಾಗರತ್ನ ಹಾಗೂ ದುಂಡೇಗೌಡ ಇವರುಗಳು ಅವರ ಆಸ್ತಿಯನ್ನು ಬರೆದುಕೊಡುತ್ತಿರುವುದಾಗಿ ಸಹಿ ಮಾಡಿರುತ್ತಾರೆಂದರೆ ಸರಿ.

12. ನಾನು ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ಹೋಗಿದ್ದರಿಂದ ಸದರಿ ಕ್ರಯದ ಕರಾರು ಪತ್ರವನ್ನು ಮಾಡುವ ಸಂದರ್ಭದಲ್ಲಿ ನನ್ನನ್ನು ಬಿಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದ್ದು ವಿಭಾಗವಾದ ಮೇಲೆ ಅವರಿಗೆ ಬಂದ ಆಸ್ತಿಯನ್ನು ಮಾರಾಟ ಮಾಡುತ್ತಿರುವುದಾಗಿ ನಮೂದಾಗಿರುತ್ತದೆಂದರೆ ಸರಿ. ಸಾಕ್ಷಿ ಅದು ಸೃಷ್ಟಿ ಮಾಡಲಾಗಿರುತ್ತದೆಂದು ನುಡಿಯುತ್ತಾರೆ. ನಾನು ದಾವೆ ಸಲ್ಲಿಸುವ ಪೂರ್ವಕ್ಕೆ ನಮ್ಮ ಒಟ್ಟು ಕುಟುಂಬದ ಸದಸ್ಯರಿಗೆ ನೊಟೀಸು ಕೊಟ್ಟಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

13. ನನ್ನ ತಂದೆ ಸದರಿ ಸರ್ವೆ ನಂ.34/1 ಹಾಗೂ 34/2 ಸದರಿ ಆಸ್ತಿಗಳನ್ನು 9ನೇ ಪ್ರತಿವಾದಿಗೆ ಮಾರಾಟ ಮಾಡಿರುವುದಾಗಿ ತಮ್ಮ ಪ್ರತಿವಾದಪತ್ರದಲ್ಲಿ ಹೇಳಿರುವುದನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ಕ್ರಯದ ಕರಾರು ಪತ್ರಕ್ಕೆ ನಮ್ಮ ಕುಟುಂಬದವರು ಸಹಿ ಮಾಡತ್ತಾರೆಂಬ ಉದ್ದೇಶವನ್ನು ತಿಳಿದುಕೊಂಡೆ ನಾನು ಪ್ರಸ್ತುತ ದಾವೆ ಹಾಕಿರುತ್ತೇನೆಂದರೆ ಸರಿ. ಸದರಿಕ್ರಯದ ಕರಾರುಪತ್ರ ಕ್ಕೆ ನನ್ನ ಕುಟುಂಬದವರು ಹಣವನ್ನು ಪಡೆದುಕೊಂಡು ಕ್ರಯ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಿಂದ ಸದರಿ ದಾವಾ

ಸ್ವತ್ತುಗಳನ್ನು ಯಾರಿಗೂ ಪರಬಾರೆ ಮಾಡಬಾರದೆಂದು ತಾತ್ಕಲಿಕ ಆದೇಶ ಪಡೆದುಕೊಂಡಿರುತ್ತೇನೆಂದರೆ ಸರಿ .

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**